SRI H.M. CHANNABASAPPA :—Such questions cannot be answered If the Hon Member is anything in view, he can straightway bring it to the notice of the Government, in which case I shall be in a position to answer.

RELIEF WORKS IN CHITRADURGA DISTRICT

317 SRI C.R. MOHAMED SAIFUDIN (Chitradurga).—Will the Minister for Revenue be pleased to state :—

(*a*) Whether the relief works taken up in Chitradurga district, have been stopped ;

(*b*) the amount allotted to the district for relief works and the amount spent so far :

(*c*) the reaaons for stopping the relief works ;

(*d*) the amount outstanding to be paid to the contractors in connection with the relief works ;

(*e*) when the Government intend paying the contractor's bill ?

SRI N. HUTCHAMASTHY GOWDA.—(Minister for Revenue)

(*a*) Relief works taken up exsept through the P.W.D. have not been stopped

(*b*) Allotment. Re. 32,27,166. Expenditure Rs. 29,20,990.

(*c*) Seasonai oonditions have improved.

(*d*) Rs. 15,00,000.

(*e*) As soon as additional Central assistance is received.

SRI C.R. MOHAMED SAIFUDDIN :—In answer to (a) is stated that relief works taken up exsept through the P.W.D. have not been stooped. May I konw which are the other works that are taken up ?

SRI N. HUCHMASTHI GOWDA :—T.D.B works taken up through Forest Department Horticultuie Department are There.

SRI C.R. MOHAMED SAIFUDDIN :—May I know when thos P.W.D. books will be taken up ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಈಗ ನನಗೆ ಇರತಕ್ಕ ಅಂಕಿ ಅಂಶಗಳಪ್ರಕಾರ ಕ್ಷಾಮ ಅಥವಾ ಅಭಾವ ಪರಿಸ್ಥಿತಿ ಹೆಚ್ಚಿಗೆ ಕಂಡುಬಾರದೆ ಇರುವಲ್ಲಿ ಕೆಲಸ ನಿಲ್ಲಿಸಲಾಗಿದೆ. ಅವಶ್ಯ ಕಂಡುಬಂದಾಗ ಕೆಲಸಗಳನ್ನು ಪ್ರಾರಂಭಮಾಡಬೇಕಾಗುತ್ತದೆ.

ಶ್ರೀ ಸಿ.ಆರ್. ಮುಹಮದ್ ಸೈಫುದ್ದೀನ್.—ರಿಲೀಫ್ ವರ್ಕ್ಸ್ ಅವಶ್ಯವಿಲ್ಲ ಎಂದು ತಾವು ಬೇಳುತ್ತಿದ್ದೀರಿ. ಅಲ್ಲಿ ಹೋಗಿ ಯಾರಾದರೂ ನೋಡಿಕೊಂಡು ಬಂದಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ನಾನು ಎರಡು ಸಾರಿ ನೋಡಿದ್ದೇನೆ. ನಾನು ಹೋಗಿರುವುದಲ್ಲದೆ ಶ್ರೀ ಸಿದ್ದವೀರಪ್ಪನವರು ಆ ಪ್ರದೇಶಗಳಿಗೆ ಹೋಗಿ ನೋಡಿಕೊಂಡು ವರದಿಮಾಡಿದ್ದಾರೆ.

ಶ್ರೀ ಸಿ.ಆರ್. ಮಹಮದ್ ಸೈಫುದ್ದೀನ್ ಶಿವಮೊಗ್ಗ ಸಿದ್ದವೀರಪ್ಪನವರು ಇದರ ಬಗ್ಗೆ ರಿಪೋರ್ಟ್ ಕೊಟ್ಟಿದ್ದಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :— ಈಗ ಕೆಲಸಗಳು ಎಷ್ಟು ಆಗಿವೆ ಆ ಕೆಲಸಗಳಿಗೆ ಕೊಡಲಿಕ್ಕೆ ಹಣ ಕೊಡಬೇಕು ಎಂದು ಹೇಳಿದ್ದಾರೆ. ಉಳಿದ ಕೆಲಸಗಳನ್ನು ಕೆಲವು ಭಾಗಗಳಲ್ಲಿ ಪ್ರಾರಂಭಮಾಡುವುದು ಅವಶ್ಯಕ ಆಗಬೇಕು ಎಂದು ಹೇಳಿದ್ದಾರೆ.

ಶ್ರೀ ಕೆ.ಚ್. ಹನುಮೇಗೌಡ :—ಕ್ಷಾಮ ಪರಿಹಾರ ನಿಧಿಯಿಂದ ತೆಗೆದುಕೊಂಡ ಕೆಲಸಗಳು ಪೂರ್ತಿ ಆಗಿವೆಯೇ ? ಕೆಲಸ ಸಾಂಕ್ಷನ್ ಮಾಡಿ ಅರ್ಧ ಕೆಲಸ ನಿಂತು ಹೋಗಿವೆ ಅಂಥ ಕೆಲಸಗಳು ಎಷ್ಟು ಇವೆ ? ಎಷ್ಟು ಹಣ ಬೇಕಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಚಿತ್ರದುರ್ಗ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಈಗ ಇರತಕ್ಕಂಥ ಕೆಲಸಗಳಿಗಾಗಿ ಕಂಟ್ರಾಕ್ಟರ್‌ಗಳಿಗೆ ಕೊಡುಬೇಕಾದಂಥಹ ಹಣ ೧೫ ಲಕ್ಷ ರೂಪಾಯಿ ಇದೆ. ಇದನ್ನು ಆದಷ್ಟು ಬೇಗ ಒದಗಿಸಿ ಕೊಡುತ್ತೇವೆ. ಮತ್ತೆ ಇನ್ನು ಉಳಿದ ಕಾಮಗಾರಿಗಳನ್ನು ಪೂರ್ಣ ಮಾಡಬೇಕಾದರೆ ೬೦ ಲಕ್ಷ ರೂಪಾಯಿ ಬೇಕು. ಆ ೬೦ ಲಕ್ಷ ರೂಪಾಯೀಗಳನ್ನು ಕೊಡುವುದು ಸಾಧ್ಯವಿಲ್ಲ, ಕಷ್ಟವಾಗಬಹುದಂ. ೧೫ ಲಕ್ಷರೂಪಾಯಿ ಆದಷ್ಟು ಬೇಗ ಒದಗಿಸಿಕೊಡುತ್ತೇವೆ.

ಶ್ರೀ ಪಾಟೆಲ್ ಪಾಪನಾಯ್ಕ :—(ಇಗೆ) ಉತ್ತರ ಕೊಡುತ್ತಾ ಕೆಲಸ ನಿಲ್ಲಿಸಿದ್ದೇವೆ ಎಂದು ಹೇಳಿರುತ್ತೀರಿ. ಹಿಂದೆ ರಿಲೀಫ್ ಕೆಲಸಗಳು ಪ್ರಾರಂಭಮಾಡಬೇಕಾದರೆ ಕ್ಷಾಮ ಬಂತು ಎಂದು ಪ್ರಾರಂಭಿಸಿದ ಮೇಲೆ ನಮಗೆ ಮಳೆ ಬಂದಿಲ್ಲ ಬೆಳೆ ಆಗಿಲ್ಲ ಯಾವ ಆಧಾರದ ಮೇಲೆ ಜುತುಮಾನ ಸ್ಥಿತಿ ಸುಧಾರಿಸಿದೆ ಎಂದು ಹೇಳುತ್ತೀರಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಸರ್ಕಾರಿ ವರದಿ ಪ್ರಕಾರ ಸೆಪ್ಟೆಂಬರ್, ಅಕ್ಟೋಬರ್ ತಿಂಗಳು ಈ ಭಾಗದಲ್ಲಿ ಮಳೆ ಆದ್ದರಿಂದ ಹಾಲಿ ಇದ್ದಂತ ಬೆಳೆ ಪಸಲು ಬರುವುದಕ್ಕೆ ಅವಕಾಶವಾಯಿತು' ಎನ್ನುವಲ್ಲಿ ವರದಿಯಿಂದ ಆ ಆಧಾರದ ಮೇಲೆ ಕೆಲಸ ನಿಲ್ಲಿಸಿದೆ.

ಶ್ರೀ ಪಟೇಲ್ ಪಾಪಾನಾಯ್ಕ.—ಕೆಲಸ ಪ್ರಾರಂಭವಾಗಬೇಕಾದರೆ ಅಲ್ಲಿ ಬೆಳೆ ಆಗಿರಲ್ಲಿಲ್ಲ, ಅಲ್ಲಿಂದೀಚೆಗೆ ಬೆಳೆಯಾಗಿಲ್ಲ ಎನ್ನುವುದು ಸರ್ಕಾರ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೆಲಸ ಪ್ರಾರಂಭವಾದಾಗ ಬೆಳೆ ಆಗಿರಲ್ಲಿಲ್ಲ. ಕೆಲಸ ಪ್ರಾರಂಭವಾದ ಮೇಲೆ ಸಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಮಳೆ ಬಂದಾಗ ಹೊಸದಾಗಿ ಬೆಳೆ ಹಾಕಿದ್ದಾರೆ, ಅದು ಕೈ ಸೇರಿದೆ ಎಂದು ಗೊತ್ತಾದ್ದರಿಂದ ಕೆಲಸವನ್ನು ನಿಲ್ಲಿಸಿದೆ.

ಶ್ರೀ ಸಿ. ಆರ್. ಮಹಮದ್ ಸೈಫುದ್ದೀನ್.—ಬೆಳೆ ಚೆನ್ನಾಗಿ ಆಗಿದೆ ಎಂದು ಹೇಳುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಬೆಳೆ ಫೈಲ್ ಆಗಿದೆ ಎಂದು ಡೆಪ್ಯುಟಿ ಕಮಿಷನರಿಂದ ವರದಿ ಬಂದಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಜಿಲ್ಲೆಯ ಕೆಲವು ಭಾಗದಲ್ಲಿ ಬೆಳೆ ಯಾಗಿದೆ ಎನ್ನುವುದು ವರದಿಯಾಗಿದೆ. ಇನ್ನು ಕೆಲವು ಭಾಗದಲ್ಲಿ ಎಂದರೆ ಮೊಳಕಾಲ್ಮೂರು ಚಳ್ಳಕೆರೆ, ಜಗಳೂರು ತಾಲ್ಲೂಕುಗಳಲ್ಲಿ ಕೆಲವು ಭಾಗದಲ್ಲಿ ಬೆಳೆ ಬಹಳ ಕಡಿಮೆಯಾಗಿದೆ ಎಂದೂ ವರದಿ ಬಂದಿದೆ.

PROMOTIONAL GRADES TO TEACHERS OF CORPORATION HIGH SCHOOLS

231 Sri T. Tare Gowda (Kallambella).—Will the Minister for Municipal Administration be pleased to state :—

(*a*) the reason for the inordinate delay in awarding promotional grade scales of pay to the teachers of Bangalore City Corporation High School ;